ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

<u>ಸಿ.ಸಿ ನಂಃ **824/ 2018**</u>

ಫಿರ್ಯಾದಿದಾರಃ ಕರ್ನಾಟಕ ಸರ್ಕಾರ ಪರವಾಗಿ ಯಾದಗಿರಿ ಅಬಕಾರಿ
ಪೋಲಿಸ್ ಠಾಣೆ.

// ವಿರುದ್ಧ //

**1** ನೇ ಆರೋಪಿಃ ಶ್ರೀ ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ,
ವಃ **35** ವರ್ಷ, ಸಾಃ ಈ/**54,** ಶಹಾಬಾದ ರೋಡ ಪ್ರಶಾಂತನಗರ (ಎ),
ರಾಜಪೂರ, ತಾಃ ಮತ್ತು ಜಿಃ ಕಲಬುರಗಿ.

<u>ದಂಡ ಪ್ರಕ್ರೀಯಾ ಸಂಹಿತೆ ಕಲಂಃ **313** ರಡಿಯಲ್ಲಿ ಆರೋಪಿಯ ಹೇಳಿಕೆ.</u>

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

1 ನೇ ಆರೋಪಿತನ ಉತ್ತರಃ

ಪ್ರಃ 02-ಚಾಸಾ-3/ಪ್ರಾಸಾ-1 ಶ್ರೀ ಶಿವಶರಣಪ್ಪ ತಂದೆ ಸಂಗಣ್ಣ, ಅಬಕಾರಿ ಪೇದೆ, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 09.04.2018 ರಂದು ನಾನು ಚಾಸಾಃ 6 ರವರೊಂದಿಗೆ ಯಾದಗಿರಿ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಅಲ್ಲಿಪೂರ ಕ್ರಾಸ್ ಹತ್ತಿರ ಯರಗೋಳ ಕಡೆಗೆ ದ್ವಿಚಕ್ರ ವಾಹದಲ್ಲಿ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ಚಾಸಾಃ 6 ರವರಿಗೆ ಖಚಿತ ಮಾಹಿತಿ ಬಂದಿರುತ್ತದೆ. ನಾವುಗಳು ಯಾದಗಿರಿ ಹೊರ ವಲಯದಲ್ಲಿನ ಜಿಲ್ಲಾಧಿಕಾರಿಯವರ ಕಚೇರಿ ಮುಂದೆ ಹೋಗಿ ಅಲ್ಲಿ ಇದ್ದ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 03-ಚಾಸಾ-3/ಪ್ರಾಸಾ-1 ರವರು ಮುಂದುವರೆದು, ನಂತರ ಮುದ್ನಾಳ ತಾಂಡಾ ಮೂಲಕ ಅಲ್ಲಿಪೂರ ಕ್ರಾಸ್ ನಿಂದ ಯರಗೋಳ ಕಡೆಗೆ ಹೋಗುವ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿರುವಾಗ ಸಾಃ 04.30 ಗಂಟಗೆ ಯಾದಗಿರಿ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಒಬ್ಬ ಸವಾರ ಮುಂಬಾಗದಲ್ಲಿ ಚೀಲ ಇಟ್ಟುಕೊಂಡು ಬರುತ್ತಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 04-ಚಾಸಾ-3/ಪ್ರಾಸಾ-1 ರವರು ಮುಂದುವರೆದು, ಸದರಿ ವಾಹವನ್ನು ನಿಲ್ಲಿಸಿ ಆತತನನ್ನು ವಿಚಾರಿಸಿದಾಗ ಸದರಿ ವ್ಯಕ್ತಿ ಅನುಮಾನಸ್ಪದವಾಗಿ ವರ್ತಿಸುತ್ತಿದ್ದರಿಂದ ಚಾಸಾಃ 6 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿಕೊಂಡು ವಾಹನದ ಮೇಲೆ ಇದ್ದ ಬಿಳಿ ಬಣ್ಣದ ಗೋಣಿ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಮಿಲಿ ಪ್ರಮಾಣದ ಓ.ಸಿ ವಿಸ್ಕಿಯ 48 ಟೆಟ್ರಾ ಪ್ಯಾಕೇಟುಗಳು, 330 ಮಿಲಿಯ ಕೆ.ಎಪ್ ಬಿಯಾರನ 36 ಟಿನ್ ಕ್ಯಾನುಗಳು ಹಾಗೂ 650 ಮಿಲಿಯ ಕೆ.ಎಫ್ ಬಿಯಾರನ 12 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 05-ಚಾಸಾ-3/ಪ್ರಾಸಾ-1 ರವರು ಮುಂದುವರೆದು, ದ್ವಿಚಕ್ರ ವಾಹನ ಕೆಎ-33 ಯು-9030 ನಂಬರಿನ ಹೊಂಡಾ ಶೈನಿ ಆಗಿರುವುದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯನ್ನು ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ಶಹಬಾದ್ ರಸ್ತೆ, ಪ್ರಶಾಂತ ನಗರ, ರಾಜಾಪೂರ, ಕಲಬುರಗಿ ಎಂದು ತಿಳಿಸಿರುತ್ತಾನೆ. ಆತ ಮದ್ಯ ಸಾಗಾಟ ಮಾಡಲು ತನ್ನ ಹತ್ತಿರ ಪರವಾನಿಗೆ ಇಲ್ಲ ಎಂದ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 06-ಚಾಸಾ-3/ಪ್ರಾಸಾ-1 ರವರು ಮುಂದುವರೆದು, ನಂತರ ಮದ್ಯ ದಾಸ್ತಾನು ಬೈಕ್ ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ದೊರೆತ ಮದ್ಯದ ಪೈಕಿ ಎರಡು ಟೆಟ್ರಾ ಪ್ಯಾಕೇಟು ಒಂದು ಬಿಯಾರ ಟಿನ್ ಕ್ಯಾನ ಮತ್ತು ಒಂದು ಬಿಯಾರ ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿರುತ್ತೇವೆ. ಸ್ಥಳದಲ್ಲಿ ಸಾಃ 4.30 ರಿಂದ 02.20 ಗಂಟೆ ವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಕಚೆರಿಗೆ ಬಂದಿದ್ದು, ಚಾಸಾಃ 6 ರವರು ಸರಕಾರದ ಪರವಾಗಿ ದೂರು ದಾಖಲು ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 07-ಚಾಸಾ-4/ಪ್ರಾಸಾ-2 ಶ್ರೀ ಶರಣಪ್ಪ ತಂದೆ ಶಿವಗ, ನಿವೃತ್ತ ಅಬಕಾರಿ ಉಪ-ನಿರೀಕ್ಷಕರು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 06.06.2018 ರಂದು ಈ ಪ್ರಕರಣದ ಮಾದರಿ

ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಪ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಒಪ್ಪಿಸಿ, ದಿಃ 19.06.2018 ರಂದು ವರದಿ ಪಡೆದುಕೊಂಡು ಕಚೇರಿಗೆ ತಂದು ಒಪ್ಪಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 08-ಚಾಸಾ-7/ಪ್ರಾಸಾ-5 ಶ್ರೀ ಸಿದ್ರಾಮಪ್ಪ ತಾಳಿಕೋಟೆ ತಂದೆ ಶ್ರೀಶೈಲ, ಅಬಕಾರಿ ನಿರೀಕ್ಷಕರು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 18.05.2018 ರಂದು ಈ ಪ್ರಕರಣದ ಕಡತವನ್ನು ಚಾಸಾ-6 ರವರಿಂದ ಪಡೆದುಕೊಂಡು ಪರಿಶೀಲಿಸಿ ಅದೇ ದಿನ ವಾಹನದ ಮಾಲೀಕತ್ವದ ಮಾಹಿತಿ ನೀಡುವಂತೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿದ್ದೆನು. ನಂತರ ವಾಹನದ B extract ಪ್ರತಿಯನ್ನು ಪಡೆದು ಪರಿಶೀಲಿಸಲಾಗಿ ವಾಹನ 2 ನೇ ಆರೋಪಿ ಲಕ್ಷ್ಮಣ ರವರ ಹೆಸರಿನಲಲಿ ಇರುವುದಾಗಿ ಕಂಡುಬಂದಿರುತ್ತದೆ. ನಂತರ 26.07.2018 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 09- ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

1 ನೇ ಆರೋಪಿತನ ಉತ್ತರಃ

ಪ್ರಃ 10- ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

1 ನೇ ಆರೋಪಿತನ ಉತ್ತರಃ

ಪ್ರಃ 11- ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ
ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

1 ನೇ ಆರೋಪಿತನ ಉತ್ತರಃ

(ಮೇಲ್ಕಾಣಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಲಾಯಿತು.)

ದಿನಾಂಕಃ 14.01.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ.ಗಳು, ಯಾದಗಿರಿ.